## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 02-01-2023

### ಮನ್ನಳ್ಳಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 01/2023 ಕಲಂ 379 ಐಪಿಸಿ :-

ದಿನಾಂಕ 01/01/2023 ರಂದು 16.00 ಗಂಟೆಗೆ ಶ್ರೀ ಮಿರ್ಜಾ ತಾಲಿಬಅಲಿ ತಂದೆ ಮಿರ್ಜಾ ಮಹ್ಮದ ಅಲಿವೊದ್ದಿನ ವಯಃ 45 ವರ್ಷ ಜಾಃ ಮುಸ್ಲಿಂ ಉಃ ಉಸ್ಮಾನಿಯಾ ಬಿಸ್ಕಿಟ ಸೆಲ್ಸಮ್ಯಾನ ಕೆಲಸ ಸಾಃ ಅವೇಶಿ ಹಿಲ್ಸ್ ಬಹದ್ದುರಪುರ ಹೈದ್ರಾಬಾದ (ಟಿ.ಎಸ್.) ರವರು ಖುದ್ದಾಗಿ ಠಾಣೆಗೆ ಹಾಜರಾಗಿ ಮೌಖಿಕ ಹೇಳಿಕೆ ನೀಡಿದರ ಸಾರಾಂಶವೆನೆAದರೆ ದಿನಾಂಕ 31/12/2022 ರಂದು ಅಂದಾಜು 11.30 ಗಂಟೆಯ ಸುಮಾರಿಗೆ ಕಾಟದಾನೆ ಹೈದ್ರಾಬಾದದಲ್ಲಿರುವ ರಿಚ್ ಫುಡ್ ಕಂಪನಿಯಲ್ಲಿ ಫಿರ್ಯಾದಿ ಮತ್ತು ವಾಹನ ಚಾಲಕ ಮಹ್ಮದ ಇರ್ಫಾನ ತಂದೆ ಮಹ್ಮದ ವಸೀಮ ಕೂಡಿ ನಮ್ಮ ಮಿನಿ ಗೂಡ್ಸ ವಾಹನ ನಂ ಟಿ.ಎಸ್-11-ಯು.ಬಿ.8636 ನೇದರಲ್ಲಿ ಒಟ್ಟು 160 ಉಸ್ಮಾನಿಯಾ ಬಿಸ್ಕಿಟ ಇರುವ ಕಾಟನಗಳು ಲೋಡ ತುಂಬಿಕೊAಡು ಜಹಿರಾಬಾದ, ಮನ್ನಾಏಖೇಳಿಯಲ್ಲಿ ಕಿರಾಣಾ ಅಂಗಡಿ, ಹೋಟೆಲ, ಹಾಗೂ ಬೇಕರಿಗಳಿಗೆ ಡೆಲಿವರಿ ನೀಡಲು ಹೈದ್ರಾಬಾದದಿಂದ 12.30 ಗಂಟೆಗೆ ಬಿಟ್ಟು ಭಂಗೂರ ಗ್ರಾಮಕ್ಕೆ ಬಂದು ಭಂಗೂರ ಗ್ರಾಮದ ಹತ್ತಿರ ಇರುವ ಒಂದು ಧಾಭಾದ ಸಮೀಪ ಎನ್,ಹೆಚ್-65 ರೋಡಿನ ಓವರ ಬ್ರೀಜ ಹತ್ತಿರ ರೋಡಿನ ಪಕ್ಕದಲ್ಲಿ ಸಾಯಂಕಾಲ ಅಂದಾಜು 6.30 ಗಂಟೆಯ ಸುಮಾರಿಗೆ ವಾಹನವನ್ನು ನಿಲ್ಲಿಸಿ ಧಾಭಾದಲ್ಲಿ ಊಟ ಮಾಡಲು ಹೋಗಿ ಊಟ ಮಾಡಿಕೊಂಡು ಮರಳಿ ಅಂದಾಜು 7.30 ಗಂಟೆಯ ಸಮಯಕ್ಕೆ ವಾಹನದ ಹತ್ತಿರ ಬಂದಾಗ ವಾಹನದ ಡೋರ್ ಖುಲ್ಲಾ ಇದ್ದಿತ್ತು. ವಾಹನದ ಒಳಗೆ ಹೋಗಿ ನೋಡಲು ವಾಹನದಲ್ಲಿರುವ ಒಟ್ಟು 114 ಉಸ್ಮಾನಿಯಾ ಬಿಸ್ಕಿಟ ಇರುವ ಕಾಟನಗಳು ಇದ್ದಿರಲಿಲ್ಲಾ. ಯಾರೊ ಅಪರಿಚಿತ ಕಳ್ಳರು ಮಿನಿ ಗೂಡ್ಸ ವಾಹನ ನಂ ಟಿ.ಎಸ್-11-ಯು.ಬಿ.8636 ನೇದರಲ್ಲಿರುವ ಒಟ್ಟು 114 ಉಸ್ಮಾನಿಯಾ ಬಿಸ್ಕಿಟ ಇರುವ ಕಾಟನಗಳು ಇವುಗಳ ಒಟ್ಟು ಅಂದಾಜು ಕಿಮ್ಮತ್ತು 88,920/- ರೂಪಾಯಿದಷ್ಟು ಕಳವು ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಹುಮನಾಬಾದ ಪೊಲೀಸ ಠಾಣೆ ಅಪರಾಧ ಸಂಖ್ಯೆ 01/2023 ಕಲಂ 302, 201 ಐಪಿಸಿ :-

ದಿನಾಂಕಃ 01/01/2023 ರಂದು ಮುಂಜಾನೆ 09ಃ00 ಗಂಟೆಗೆ ಪಿರ್ಯಾದಿ ಶ್ರೀ ನಬಿಸಾಬ ತಂದೆ ಮೋದಿನ್ ಸಾಬ ಮುಜಾವಾರ್ ವಯ 67 ವರ್ಷ ಜಾತಿ ಮುಸ್ಲಿಂ ಉದ್ಯೋಗ ಅಬ್ಬಾಸಾಬ ದರ್ಗಾದಲ್ಲಿ ಮೌಲ್ವಿ ಸಾ|| ಧುಮ್ಮನಸೂರ ತಾ|| ಹುಮನಾಬಾದ ಜಿ|| ಬೀದರ ಮೊ ನಂ 8884078923 ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೆನೆAದ್ದರೆ, ದಿನಾಂಕ 01/01/2023 ರಂದು ಮುಂಜಾನೆ 07:00 ಗಂಟೆಗೆ ಫಿರ್ಯಾದಿಯು ಹೊಲಕ್ಕೆ ಹೋಗಿ, ಹೊಲದಲ್ಲಿದ್ದ ಅಬ್ಬಾಸಾಬ ದರ್ಗಾದಲ್ಲಿ ಒಳಗಡೆ ಸಾಪ-ಸಪಾಯಿ ಕೆಲಸ ಮಾಡಿ, ನಂತರ ದರ್ಗಾದ ಸುತ್ತಾ-ಮುತ್ತಾ ಜಾಡು ಹೊಡೆಯುತ್ತಾ ದರ್ಗಾದ ಹಿಂದುಗಡೆ ಹೋದಾಗ, ದರ್ಗಾದ ಹಿಂದುಗಡೆ ಹುಣಸಿನ ಮರದ ಕೆಳಕಡೆ ಅಂದಾಜು 55 ವರ್ಷದ ಒಬ್ಬ ಅಪರಿಚಿತ ವ್ಯಕ್ತಿಯನ್ನು ಬಿದ್ದಿರುವುದು ನೋಡಿ, ಸಮೀಪ ಹೋಗಿ ನೋಡಲು, ಆತನ ಮುಂಭಾಗದ ಎಡಗಡೆ ತಲೆಯ ಮೇಲೆ ಭಾರಿ ರಕ್ತಗಾಯವಾಗಿ, ಮೃತ ಪಟ್ಟಿರುತ್ತಾನೆ. ಅವನ ಮೈಮೇಲೆ ಕಂದು ನೀಲಿ ಬಣ್ಣದ ಸಫಾರಿ ಹಾಫ ಶರ್ಟ ಮತ್ತು ಪ್ಯಾಂಟ ಧರಿಸಿದ್ದು. ಕೈಯಲ್ಲಿ ಗಡಿಯಾರ ಹಾಕಿಕೊಂಡಿದ್ದು, ಟೊಂಕಿನಲ್ಲಿ ಉಡಧಾರಾ ಧರಿಸಿದ್ದು, ಕಾಲಲ್ಲಿ ಕಪ್ಪು ಬಣ್ಣದ ಸಾಕ್ಸ ಮತ್ತು ಶೂ ಧರಿಸಿರುತ್ತಾನೆ. ತಲೆಯ ಮೇಲೆ ಕೂದಲುಗಳು ಉದರಿದ್ದು ಸ್ವಲ್ಪ ಕೂದಲುಗಳಿದ್ದು ಅವು ಬಿಳಿ ಮತ್ತು ಕಪ್ಪು ಮಿಶ್ರಿತ ಕೂದಲುಗಳಿರುತ್ತವೆ. ಅವನ ಮುಖ ಗೊಲು ಮುಖ ಗೋದಿ ಮೈಬಣ್ಣ ಉಳ್ಳವನಾಗಿರುತ್ತಾನೆ ಅವನ ಅಂದಾಜು ಎತ್ತರ 5 ಫೀಟ 1 ಇಂಚ ಎತ್ತರ ಉಳ್ಳವನಾಗಿರುತ್ತಾನೆ ದಿನಾಂಕ 31/12/2022 ರಂದು ಸಂಜೆ 7:00 ಗಂಟೆಯಿAದ ದಿನಾಂಕ 01/01/2023 ರಂದು ಮುಂಜಾನೆ 07ಃ00 ಗಂಟೆಯ ಮಧ್ಯದ ಅವಧಿಯಲ್ಲಿ ಯಾರೋ ಅಪರಿಚಿತ ಜನರು ಯಾವುದೋ ಉದ್ದೇಶದಿಂದ, ಯಾವುದೋ ಭಾರಿ ಆಯುಧದಿಂದ ಸದರಿ ಅಪರಿಚಿತ ವ್ಯಕ್ತಿಯ ತಲೆಯಲ್ಲಿ ಹೊಡೆದು ಭಾರಿ ರಕ್ತಗಾಯ ಪಡಿಸಿ ಕೊಲೆ ಮಾಡಿದಂತೆ ಕಂಡು ಬರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.